**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.**

**ಸಿ.ಸಿ. ಸಂಖ್ಯೆ55/2021**

ಮಣಿಪಾಲ ಪೋಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

1. ಗಿರಿರಾಜ್ ಪಾಲನ್,
ಪ್ರಾಯಃ 39 ವರ್ಷ,
ತಂದೆಃ ಗುರುರಾಜ್ ಕೋಟ್ಯಾನ್,
ವಾಸಃ ಶ್ರೀ ಕಮಲ ಹೌಸ್,
ಪಡುದಡ್ಡಿ, ಕಿದಿಯೂರ್ ಪೋಸ್ಟ್
ಉಡುಪಿ ತಾಲೂಕು, ಉಡುಪಿ.

2. ಜೋಸೆಫ್ ರೋಮಿಯೋ ಡಾಂತೆ,
ಪ್ರಾಯಃ 29 ವರ್ಷ,
ತಂದೆಃ ರಾಬರ್ಟ ಅಗಸ್ಟಿನ್ ಡಾಂತೆ,
ವಾಸಃ 9-1, ಗುಜ್ಜರಬೆಟ್ಟು, ಪಡುತೋನ್ಸೆ,
ಕೆಮ್ಮಣ್ಣು, ಉಡುಪಿ ತಾಲೂಕು, ಉಡುಪಿ.

3. ಗುರುಪ್ರಸಾದ್ ಅಲಿಯಾಸ್ ಹರಿ,
ಪ್ರಾಯಃ 30 ವರ್ಷ,
ತಂದೆಃ ಪ್ರಭಾಕರ,
ವಾಸಃ 2-81 ಎಲ್.ವಿ.ಟಿ. ದೇವಸ್ಥಾನದ ಹಿಂದೆ,
ಸಂತೆಕಟ್ಟೆ ಪೋಸ್ಟ್, ಪುತ್ತೂರು ಗ್ರಾಮ,
ಉಡುಪಿ. …….. ಆರೋಪಿತರು

<u>ದೋಷಾರೋಪಣೆ</u>

ಪಿ.ಆರ್. ಯೋಗೇಶ್, ಬಿ.ಕಾಂ. ಎಲ್.ಎಲ್.ಬಿ., ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ, ಆದ ನಾನು ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 06.07.2021 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ಉಡುಪಿ ತಾಲೂಕು ಅಲೆವೂರು ಗ್ರಾಮದ ರಾಂಪುರ ಜಂಕ್ಷನ್ ಬಳಿ ಚಾ.ಸಾ.1 ಮತ್ತು 2 ರವರು KA-20-MA-0675 ಸಂಖ್ಯೆಯ Etios ವಾಹನದಲ್ಲಿ ಕಟಪಾಡಿ ಕಡೆಗೆ ಹೋಗುತ್ತಿದ್ದಾಗ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ KA-07-5094 ಸಂಖ್ಯೆಯ Bolero Pick-up ವಾಹನದಲ್ಲಿ ಬಂದು ಚಾಸಾ.1 ಮತ್ತು 2 ರವರನ್ನು ಅಡ್ಡಗಟ್ಟಿ ತಡೆದು ಅವರ ಸಂಚಾರವನ್ನು ಹಿಡಿದಿಡುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 341 ಸಹ ಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ ಚಾ.ಸಾ.1 ರವರನ್ನು ವಾಹನದಿಂದ ಇಳಿಸಿ ಅವರ ಮುಖಕ್ಕೆ ಮುಷ್ಟಿಯಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 323 ಸಹ ಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ ಚಾ.ಸಾ.1 ರವರ ಮುಖಕ್ಕೆ ಪೆಟ್ರೋಲ್ ಸುರಿದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 324 ಸಹ ಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ ಚಾ.ಸಾ.1 ರವರ ವಾಹನದ ಹೆಡ್ ಲೈಟ್ ಹಾಗೂ ಮುಂದಿನ ಗಾಜಿಗೆ ಹೊಡೆದು ಸುಮಾರು 10,000 ರೂಪಾಯಿಗಳಷ್ಟು ನಷ್ಟವನ್ನುಂಟು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 427 ಸಹ ಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ ಚಾ.ಸಾ.1 ರವರನ್ನು Etios ವಾಹನದ ಹಿಂಭಾಗದಲ್ಲಿ ಅಕ್ರಮವಾಗಿ

ಬಂಧಿಸಿಡುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 342 ಸಹ ಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ ಚಾ.ಸಾ.1 ರವರನ್ನು ನಿಮ್ಮ ಕಾರಿನಲ್ಲಿ ಅಪಹರಿಸಿ ಕೊಂಡುಹೋಗಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 365 ಸಹ ಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ ಚಾ.ಸಾ.1 ರವರನ್ನು ನಿಮ್ಮ ಕಾರಿನಲ್ಲಿ ಕರೆದುಕೊಂಡು ಹೋಗುವಾಗ ಜಾನುವಾರನ್ನು ಯಾರಿಗೆ ಮಾರಾಟ ಮಾಡುತ್ತಿಯಾ ಎಂದು ಹೇಳೋ ಇಲ್ಲವಾದಲ್ಲಿ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆಯನ್ನು ಹಾಕುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 506 ಸಹ ಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲಿನ ದೋಷಾರೋಪಣೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 4 ನೇ ದಿನ ಆಗಸ್ಟ್ ತಿಂಗಳು, 2023.

(ಪಿ.ಆರ್. ಯೋಗೇಶ್)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.**

**ಸಿ.ಸಿ. ನಂ. 55/2021**

ಮಣಿಪಾಲ ಪೋಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

3. ಗುರುಪ್ರಸಾದ್ ಅಲಿಯಾಸ್ ಹರಿ,
ಪ್ರಾಯಃ 30 ವರ್ಷ,
ತಂದೆಃ ಪ್ರಭಾಕರ,
ವಾಸಃ 2-81 ಎಲ್.ವಿ.ಟಿ. ದೇವಸ್ಥಾನದ ಹಿಂದೆ,
ಸಂತೆಕಟ್ಟೆ ಪೋಸ್ಟ್, ಪುತ್ತೂರು ಗ್ರಾಮ,
ಉಡುಪಿ. …….. ಆರೋಪಿ

<u>ದೋಷಾರೋಪಣೆ</u>

ಪ್ರಶ್ನೆ 1ಃ ಈಗ ನಿಮಗೆ ಓದಿ ವಿವರಿಸಿದ ದೋಷಾರೋಪಣೆಯು ತಿಳಿಯಿತೇ?

ಉತ್ತರಃ

ಪ್ರಶ್ನೆ 2 ಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರ ಃ

ಮೇಲಿನ ದೋಷಾರೋಪಣೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 4 ನೇ ದಿನ ಆಗಸ್ಟ್ ತಿಂಗಳು, 2023.

(ಪಿ.ಆರ್. ಯೋಗೇಶ್)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.